## ಪ್ರಾರ್ಥನೆ

# ತೀರ್ಥಮಹಿಮೆ

**ಪಾಪಾಪಹಾರಿ ದುರಿತಾರಿ ತರಂಗಧಾರಿ**
**ಶೈಲಪ್ರಚಾರಿ ಗಿರಿರಾಜಗುಹಾವಿಹಾರಿ ।**
**ಝುಂಕಾರಕಾರಿ ಹರಿಪಾದರಜೋಽಪಹಾರಿ**
**ಗಾಂಗಂ ಪುನಾತು ಸತತಂ ಶುಭಕಾರಿ ವಾರಿ ॥**

ಪಾಪಗಳನ್ನೆಲ್ಲಾ ಹೋಗಲಾಡಿಸುವ, ಆಪತ್ತುಗಳನ್ನು ಪರಿಹರಿಸುವ ಅಲೆಗಳನ್ನು ಧರಿಸಿರುವ, ಪರ್ವತದಲ್ಲಿ ಸಂಚರಿಸುವ ಹಿಮವಂತನ ಗುಹೆಗಳಲ್ಲಿ ವಿಹರಿಸುತ್ತಾ ಮಂಜುಳನಾದಗೈಯುವ, ಹರಿಯ ಪಾದ ತೊಳೆದ, ಗಂಗೆಯ ಶುಭಕರವಾದ ನೀರು ನಮ್ಮನ್ನು ಪಾವನಗೊಳಿಸಲಿ.

*—ವಾಲ್ಮೀಕಿ*

**ಗತಂ ತದ್ವೈವ ಮೇ ಭಯಂ ತ್ವದಂಬು ವೀಕ್ಷಿತಂ ಯದಾ**
**ಮೃಕಂಡುಸೂನುಶೌನಕಾಸುರಾರಿಸೇವಿತಂ ಸದಾ ।**
**ಪುನರ್ಭವಾಬ್ಧಿಜನ್ಮಜಂ ಭವಾಬ್ಧಿದುಃಖವರ್ಮದೇ**
**ತ್ವದೀಯಪಾದಪಂಕಜಂ ನಮಾಮಿ ದೇವಿ ನರ್ಮದೇ ॥**

ಮಾರ್ಕಂಡೇಯ, ಶೌನಕ, ಶಿವ ಮೊದಲಾದವರಿಂದ ಸದಾ ಸೇವಿತಳಾದ ನಿನ್ನ ಪಾವನ ಜಲವನ್ನು ಕಂಡಕೂಡಲೇ ನನ್ನ ಭಯ ಓಡಿಹೋಯಿತು. ಜನನ-ಮರಣ ಚಕ್ರವುಳ್ಳ ಈ ಭವದಿಂದ ಉಂಟಾಗುವ ದುಃಖವನ್ನು ಪರಿಹರಿಸಿ ಶಾಂತಿಯನ್ನು ಕರುಣಿಸುವ ದೇವಿ ನರ್ಮದೇ, ನಿನ್ನ ಪಾದಕಮಲಗಳನ್ನು ವಂದಿಸುವೆ.

*— ಶ್ರೀ ಶಂಕರಾಚಾರ್ಯ*

**ಯಸ್ಯಾ ಅನಂತೋ ಅಹ್ರುತಸ್ತ್ವೇಷಶ್ಚರಿಷ್ಣುರರ್ಣವಃ ।**
**ಅಮಶ್ಚರತಿ ರೋರುವತ್ ॥**

ಯಾವ ಸರಸ್ವತಿಯ ಅನಂತವಾದ ಶಕ್ತಿಯು, ಶತ್ರುಗಳಿಂದ ಹಿಂಸಿಸಲ್ಪಡದೆ ಕಾಂತಿಯುತವಾಗಿ ಸರ್ವವ್ಯಾಪಕವಾಗಿ ಜೋರಾದ ಧ್ವನಿಗೈಯುತ್ತಾ ನೀರಿನ ರೂಪದಲ್ಲಿ ಚಲಿಸುತ್ತದೆಯೋ ಅದು ನಮ್ಮನ್ನು ರಕ್ಷಿಸಲಿ.

*— ಋಗ್ವೇದ, ಸರಸ್ವತೀ ಸೂಕ್ತ, ೬.೬೧.೮*

**ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ**
**ಹಿಮಾಲಯೋ ನಾಮ ನಗಾಧಿರಾಜಃ ॥**
**ಪೂರ್ವಾಪರೌ ತೋಯನಿಧೀ ವಗಾಹ್ಯ**
**ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥**

ದೇವತೆಗಳ ವಾಸಸ್ಥಾನವಾದ ಹಿಮಾಲಯವೆಂಬ ಪರ್ವತರಾಜನು ಉತ್ತರದಿಕ್ಕಿನಲ್ಲಿರುವನು. ಪೂರ್ವ ಹಾಗೂ ಪಶ್ಚಿಮ ಸಮುದ್ರಗಳವರೆಗೆ ಹರಡಿದ ವಿಸ್ತಾರವಾದ ಶರೀರವುಳ್ಳ ಅವನು ಭೂಮಿಯನ್ನು ಅಳೆಯುವ ಮಾನದಂಡದಂತಿದ್ದಾನೆ.

*— ಕಾಳಿದಾಸ, ಕುಮಾರ ಸಂಭವ, ೧.೧.*

**ಮನೋನಿವೃತ್ತಿಃ ಪರಮೋಪಶಾಂತಿಃ**
**ಸಾ ತೀರ್ಥವರ್ಯಾ ಮಣಿಕರ್ಣಿಕಾ ಚ ।**
**ಜ್ಞಾನಪ್ರವಾಹಾ ವಿಮಲಾದಿಗಂಗಾ**
**ಸಾ ಕಾಶಿಕಾಽಹಂ ನಿಜಬೋಧರೂಪಾ ॥**

ಚಿತ್ತವೃತ್ತಿಯ ನಿವೃತ್ತಿಯೇ ಪರಮಶಾಂತಿ; ಅದೇ ಮಣಿಕರ್ಣಿಕೆಯೆಂಬ ಶ್ರೇಷ್ಠ ತೀರ್ಥ; ನನ್ನಲ್ಲಿರುವ ಜ್ಞಾನಪ್ರವಾಹವೇ ವಿಮಲವಾದ ಗಂಗೆ; ಅಂತಹ ನಿಜಬೋಧರೂಪವಾಗಿರುವ ಕಾಶೀಕ್ಷೇತ್ರವೇ ನಾನಾಗಿರುವೆ.

**ಕಾಶ್ಯಾಂ ಹಿ ಕಾಶ್ಯತೇ ಕಾಶೀ ಕಾಶೀ ಸರ್ವಪ್ರಕಾಶಿಕಾ**
**ಸಾ ಕಾಶೀ ವಿದಿತಾ ಯೇನ ತೇನ ಪ್ರಾಪ್ತಾ ಹಿ ಕಾಶಿಕಾ ॥**

ಕಾಶಿಯಲ್ಲೇ ನಿಜವಾಗಿ ಪರಂಜ್ಯೋತಿಯಿರುವುದು. ಕಾಶಿಯೇ (ಆತ್ಮವೇ) ಪ್ರಪಂಚದಲ್ಲಿ ಎಲ್ಲವನ್ನೂ ಬೆಳಕಿಗೆ ತರುವುದು. ಯಾರು ಕಾಶಿಯನ್ನು ಅರಿತಿರುವನೋ ಅವರು ಕಾಶಿಯನ್ನು ನಿಜವಾಗಿ ಪಡೆದವರು.

*— ಶ್ರೀ ಶಂಕರಾಚಾರ್ಯ, ಕಾಶೀಪಂಚಕ, ೧,೪*

## ಸೂಕ್ತಿಪ್ರಭ

## ತೀರ್ಥ-ಸೂಕ್ತಿಗಳು

**ತೀರ್ಥೇಷು ಲಭ್ಯತೇ ಸಾಧೂ ರಾಮಚಂದ್ರಪರಾಯಣಃ ।**
**ಯದ್ದರ್ಶನಂ ನೃಣಾಂ ಪಾಪರಾಶಿದಾಹಾಶುಶುಕ್ಷಣಿಃ ॥**
**ತಸ್ಮಾತ್ ತೀರ್ಥೇಷು ಗಂತವ್ಯಂ ನರೈಃ ಸಂಸಾರಭೀರುಭಿಃ ।**
**ಪುಣ್ಯೋದಕೇಷು ಸತತಂ ಸಾಧುಶ್ರೇಣಿವಿರಾಜಿಷು ॥**

ತೀರ್ಥಗಳಲ್ಲಿ ರಾಮಚಂದ್ರನಲ್ಲಿ ಭಕ್ತಿಯುಳ್ಳ ಸಾಧುಗಳು ಲಭಿಸುತ್ತಾರೆ. ಅವರ ದರ್ಶನವು ಪಾಪರಾಶಿಗೆ ಅಗ್ನಿಯಂತಿರುವುದು. ಆದ್ದರಿಂದ ಸಂಸಾರದ ಭೀತಿಯುಳ್ಳವರು ತೀರ್ಥಗಳಿಗೆ ಹೋಗಬೇಕು. ಏಕೆಂದರೆ, ಆ ಪುಣ್ಯೋದಕಗಳಲ್ಲಿ ಸಾಧುಗಳಿರುವರು.

*(ಪದ್ಮಪುರಾಣ, ಪಾತಾಲಖಂಡ, ೧೯.೧೬-೧೭)*

**ತೀರ್ಥೀಕುರ್ವಂತಿ ತೀರ್ಥಾನಿ ಸುಕರ್ಮೀಕುರ್ವಂತಿ ಕರ್ಮಾಣಿ**
**ಸಚ್ಛಾಸ್ತ್ರೀಕುರ್ವಂತಿ ಶಾಸ್ತ್ರಾಣಿ ।**

ಭಕ್ತರು ತೀರ್ಥಗಳನ್ನು ಪವಿತ್ರ ಮಾಡುವರು, ಸಾಧಾರಣ ಕರ್ಮವನ್ನು ಸುಕರ್ಮವನ್ನಾಗಿ ಮಾಡುವರು, ಶಾಸ್ತ್ರಗಳನ್ನು ಸತ್‌ಶಾಸ್ತ್ರಗಳನ್ನಾಗಿ ಮಾಡುವರು. *(ನಾರದ ಭಕ್ತಿಸೂತ್ರ, ೬೯)*

ಭಕ್ತನು ವಿದ್ಯಾಮಾಯೆಯನ್ನು ಆಶ್ರಯಿಸಿಕೊಂಡು ಇರುತ್ತಾನೆ. ಸಾಧುಸಂಗ, ತೀರ್ಥಯಾತ್ರೆ, ಜ್ಞಾನ, ವೈರಾಗ್ಯ ಇವುಗಳೆಲ್ಲದರ ಆಶ್ರಯ ಮಾಡಿಕೊಂಡು ಇರುತ್ತಾನೆ.

*ಶ್ರೀರಾಮಕೃಷ್ಣರು (ವಚನವೇದ, ಭಾಗ ೨, ಪು. ೨೧೪)*